**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 37/2021**

**ಪಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 27.11.2024.**

**ಮುಂ. ಪಾಟೀ ಸವಾಲುಃ ಶ್ರೀ ಎಸ್ ಎಮ್ ಎಮ್ ವಕೀಲರಿಂದ 1 ಮತು 2 ನೇ ಪ್ರತಿವಾದಿಗಳ ಪರ ವಕೀಲರುಃ**

6. ನಾನು 4 ನೇ ತರಗತಿವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಮೂಲ ವಾದ ಪತ್ರದಲ್ಲಿ ಬರೆದಿರುವ ಸಂಗತಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದ ಪತ್ರವನ್ನು ಬರೆಯಲು ಮಾಹಿತಿ ನಾನೇ ನೀಡಿರುತ್ತೇನೆ. 1987 ರಲ್ಲಿ ನನ್ನ ತಂದೆ ಖರೀದಿ ಹಿಡಿದ ಖರೀದಿ ಪತ್ರವನ್ನು ಓದಿ ನೋಡಿರುತ್ತೇನೆ. ನನ್ನ ತಂದೆ ಆ ಖರೀದಿ ಪತ್ರದ ಮೂಲಕ ಮನೆ ಮತ್ತು ಹಿತ್ತಲವನ್ನು ಖರೀದಿ ಹಿಡಿದಿದ್ದರಾ ಎಂದರೆ ಸಾಕ್ಷಿ ಬಿದ್ದ ಮನೆ ಮತ್ತು ಹಿತ್ತಲು ಖರೀದಿಸಿದ್ದು ಎಂದು ನುಡಿಯುತ್ತಾರೆ. ಅದರ ಆಸ್ತಿ ನಂಃ999 ಆಗಿರುತ್ತದೆ. ಬಿದ್ದ ಮನೆಯ ವಿಸ್ತೀರ್ಣ ಪೂರ್ವ ಪಶ್ಚಿಮ 18 ಪೂಟು ಹಾಗೂ ಉತ್ತರ ದಕ್ಷಿಣ 19 ವರೆ ಪೂಟು ಇತ್ತು ಎಂದು ನುಡಿಯುತ್ತಾರೆ. ಹಿತ್ತಲು 6 ಪೂಟು ಅಗಲ, 9 ಪೂಟು ಉದ್ದ ಇತ್ತು.

7. ನಿಮಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಅಂತ ಹೇಳಿದ್ದು, ನೀವು ನಿಮ್ಮ ವಕೀಲರಿಗೆ ಸದರಿ ಖರೀದಿ ಪತ್ರವನ್ನು ಓದಿ ಅದರಲ್ಲಿನ ವಿಚಾರಗಳನ್ನು ಹೇಳಲು ತಿಳಿಸಿದ್ದೀರಾ ಎಂದರೆ ಸಾಕ್ಷಿ ತಿಳಿಸಿದ್ದೆ ಎಂದು ನುಡಿಯುತ್ತಾರೆ. ನಮ್ಮ ವಕೀಲರು 1987 ರಲ್ಲಿ ನಿಮ್ಮ ತಂದೆ ರೂ 2 ಸಾವಿರಕ್ಕೆ ಖರೀದಿ ಹಿಡಿದಿರುತ್ತಾರೆ ಅಂತ ತಿಳಿಸಿದರು. ನಿಮ್ಮ ವಕೀಲರು ಆ ಆಸ್ತಿ ನಂಃ999 ಅಂತ ಹೇಳಿದರೋ ಅಥವಾ ಅದರ ಭಾಗ ಅಂತ ಹೇಳಿದರೋ ಎಂದರೆ ಸಾಕ್ಷಿ ಪೂರಾ ಅಂತ ತಿಳಿಸಿದರು ಎಂದು ನುಡಿಯುತ್ತಾರೆ.

8. ನಾನು ಹಾಜರುಪಡಿಸಿದ ನಿಪಿಃ1 ರಲ್ಲಿ ಧಾರವಾಡ ಜಿಲ್ಲಾ ಕುಂದಗೋಳ ತಾಲೂಕ ಸರಹದ್ದಿಯ ಪೈಕಿ ಮತ್ತು ಕಳಸ ಮಂಡಳ ಪಂಚಾಯತ ಹದ್ದಿಯ ಪೈಕಿರ ಕಳಸ ಗ್ರಾಮದ ಮುಲ್ಲಾನವರ ಓಣಿಯ ನಮ್ಮ ಮಾಲ್ಕೀ ವಹಿವಾಟಿಯ ವಿಪಿಸಿ ನಂಃ999 ನೇಯ ಬಿದ್ದ ಮನೆಯ ಜಾಗ ಹಾಗೂ ಇದಕ್ಕೆ ಸಂಬಂದಿಸಿದ ಪರಭಾರೆ ಇದ್ದ ಹಿತ್ತಲ ಪೈಕಿ ಉತ್ತರ ಕಡೆಯ 1/3 ಭಾಗ ಇವುಗಳು ಎಂದು ಬರೆಯಲಾಗಿದೆ ಎಂದು ಓದಿ ಹೇಳಿದಾಗ ಸಾಕ್ಷಿ ಅದನ್ನು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಸದರಿ ಭಾಗವನ್ನು ನಿಪಿಃ1 ಎ ಎಂದು ಗುರುತಿಸಲಾಯಿತು.

9. ಅದೇ ರೀತಿ ನಿಪಿಃ1 ರಲ್ಲಿ ಮುಂದುವರೆದು 3 ನೇ ಪುಟದಲ್ಲಿ ಕ್ರಯ ಪತ್ರದ ಎರಡನೇ ಭಾಗದಲ್ಲಿ ಪರಭಾರೆ ಇದ್ದ ಹಿತ್ತಲ ಜಾಗೆಯಲ್ಲಿಯ ಉತ್ತರ ಭಾಗದ 1/3 ಜಾಗ ಇದರ ಅಳತೆ ಪೂರ್ವ ಪಶ್ಚಿಮ 9 ಪೂಟು, ಉತ್ತರ ದಕ್ಷಿಣ 6 ಪೂಟು ಚದರ ಮೀಟರ 5.016 ಅದೇ ಅಂತ ಬರೆದಿದೆ ಎಂದರೆ ಸಾಕ್ಷಿ ಅದನ್ನು ಒಪ್ಪಿದ್ದರಿಂದ ಸದರಿ ಭಾಗವನ್ನು ನಿಪಿಃ1 ಬಿ ಎಂದು ಗುರುತಿಸಲಾಯಿತು. ನಾನು ನನ್ನ ವಾದ ಪತ್ರದಲ್ಲಿ 999 ಆಸ್ತಿಯನ್ನು ಸಂಪೂರ್ಣವಾಗಿ ಹಿಡಿದಿರುವ ಬಗ್ಗೆ ಹೇಳಿದ್ದು ಆದರೆ ನಿಪಿಃ1 ರ ಪ್ರಕಾರ ವಿಪಿಸಿ ನಂಃ999 ರ ಒಂದು ಭಾಗ ಮಾತ್ರ ಕ್ರಯ ಆಗಿರುವ ಬಗ್ಗೆ ಹೇಳುತಿದ್ದು ಇವು ಎರಡರಲ್ಲೂ ಯಾವುದೇ ಸತ್ಯ ಎಂದರೆ ಸಾಕ್ಷಿ 1/3 ಕ್ರಯ ಪತ್ರದಲ್ಲಿ ಹೇಳಿದ್ದೆ ಸತ್ಯ ಎಂದು ನುಡಿಯುತ್ತಾರೆ.

10. ನಾನು ಕುಂದಗೋಳ ತಾಲೂಕ ಪಂಚಾಯತಿಯಲ್ಲಿ ಒಂದು ದಾವಾ ಆಸ್ತಿ ಮೇಲೆ ದಾಖಲಿಸಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿಯರು ಹಾಜರಾಗಿ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ತಾಲೂಕ ಪಂಚಾಯತಿ ಅಧಿಕಾರಿಗಳು ತಾವೇ ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿ ವಿಪಿಸಿ ನಂಃ999 ರ ಚಕ್ಕುಬಂದಿಯನ್ನು ಕ್ರಯ ಪತ್ರದ ಪ್ರಕಾರ ಅಳತೆ ಮಾಡಿ ಸ್ಥಾಪಿಸಿ ಕೊಡುತ್ತೇವೆ ಅಂತ ಹೇಳಿದ್ದರು ಎಂದರೆ ಸರಿಯಲ್ಲ. ಈ ರೀತಿ ತಾಲೂಕಾ ಪಂಚಾಯತಿ ಅಧಿಕಾರಿಗಳು ಹೇಳಿದ್ದರು ಸಹ ಇಲ್ಲ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

11. ನಾನು ದಾಖಲಿಸಿದ ದಾವಾ ಆಸ್ತಿ ಅಕ್ಕಪಕ್ಕ ಎಂದರೆ ಪಶ್ಚಿಮಕ್ಕೆ 998 ಆಸ್ತಿ, ಉತ್ತರಕ್ಕೆ ರೋಡ, ದಕ್ಷಿಣಕ್ಕೆ ಹಜರೇಸಾಬ ಹುಸ್ಮಾನಸಾಬ ಮುಲ್ಲಾ ಹಾಗೂ ಪೂರ್ವಕ್ಕೆ ಶೀಮಂತಪ್ಪ ಬಾರಕೇರ ಇವರ ಮನೆ ಇದೆ. ಸಾಕ್ಷಿಗೆ ತಾವು ವಾದಪತ್ರದೊಂದಿಗೆ ಹಾಜರುಪಡಿಸಿದ ಹಾತ್ ನಕಾಶೆಯನ್ನು ತೋರಿಸಿ ವಿಪಿಸಿ ನಂಃ999, ವಿಪಿಸಿ ನಂಃ999 1/3 ಭಾಗ ಹಾಗೂ 998, 998/ಬ ಹಾಗೂ 1000/ಬ ಅಂತ ಬರೆದು ಹಾಕಿರುತ್ತೀರಿ ಎಂದರೆ ಸಾಕ್ಷಿ ಅದು ಸರಿ ಇಲ್ಲ ಎಂದು ನುಡಿಯುತ್ತಾರೆ.

12. ನೀವು ಹಾಜರುಪಡಿಸಿದ ಹಾತ್ ನಕಾಶೆಯಲ್ಲಿ ವಿಪಿಸಿ ನಂಃ999 ಹಾಗೂ 999 ರ 1/3 ಭಾಗದ ನಡುವೆ ಖಾಲಿ ಜಾಗೇ ತೋರಿಸಿದ್ದು, ಅಲ್ಲಿ ಯಾರ ಆಸ್ತಿ ಬರುವುದಿಲ್ಲವಾ ಎನ್ನುವ ಪ್ರಶ್ನೆಗೆ ಸಾಕ್ಷಿಗೆ ಅಲ್ಲಿ ಯಾರು ಇಲ್ಲ, ಆ ಜಾಗೆ ಹಾಗೇ ಇದೆ ಎಂದು ನುಡಿಯುತ್ತಾರೆ. ಸದರಿ ಜಾಗೆ ಸರಿಕಾರ ಜಾಗೆಯೋ ಅಥವಾ ಖಾಸಗೀ ಜಾಗೆಯೋ ಎಂದರೆ ಸಾಕ್ಷಿ ಅದು ಹುಸ್ಮನಮಿಯಾ ಇವರ ಜಾಗೆ ಎಂದು ನುಡಿಯುತ್ತಾರೆ.

13. **1995-96**ನೇ ಸಾಲಿನಲ್ಲಿ ನಮ್ಮ ಮನೆತನದ ಹಿರಿತನವನ್ನು ನಮ್ಮ ತಂದೆ ಮಾಡುತಿದ್ದರು ಎಂದರೆ ಸರಿಯಲ್ಲ. ಈ ರೀತಿ ಸದರಿ ಇಸ್ವಿಯಲ್ಲಿ ನಮ್ಮ ತಂದೆ ಹಿರಿತನ ಮಾಡುತಿದ್ದರು ಹಾಗೂ ಆ ಸಮಯದಲ್ಲಿ ಅವರ ಅಣ್ಣತಮ್ಮಂದಿರು ಎಲ್ಲಾ ಸೇರಿ ಒಂದು ಅಪಸ್ನಾತ ವಾಟ್ನಿ ಮಾಡಿಕೊಂಡು ಆ ಪ್ರಕಾರ ಪಂಚಾಯತಿಗೆ ಒಂದು ವರದಿ ನೀಡಿ, ತಮ್ಮ ತಮ್ಮ ಹೆಸರಿಗೆ ಜಾಗೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಈ ರೀತಿ ಅವರು ವಾಟ್ನಿ ಮಾಡಿಕೊಂಡಿದ್ದು ನನಗೆ ಗೊತ್ತಿದ್ದರು ಇಲ್ಲ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

14. ವಿಪಿಸಿ ನಂಃ999ರ ಭಾಗವಾಗಿ 999/1, 999/2, 999/3, 1000/ಅ, 1000/ಬ ಹಾಗೂ 1000/ಬ/ಕ ಇವು ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ಈಗ ನಾನು ಪ್ರಸ್ತುತ ವಾಸವಾಗಿರುವ ಆಸ್ತಿ ನಂಃ999 ಇರುತ್ತದೆ. ಸಾಕ್ಷಿ ಮುಂದುವರೆದು ನಾನು ಬಿದ್ದು ಮನೆ ಒಳಗೆ ಒಂದು ಶೆಡ್ಡು ಹಾಕಿಸಿಕೊಂಡು ಇದ್ದೇನೆ ಎಂದು ನುಡಿಯುತ್ತಾರೆ.

15. ವಿಪಿಸಿ ನಂಃ1000/ಅ ಆಸ್ತಿಗೆ ಅಕ್ಬರಸಾಬ ತಂದೆ ಉಸ್ಮಾನಸಾಬ ಮುಲ್ಲಾ ಇವರ ಹೆಸರು ಇದೆ ಅಂತ ಸಾಕ್ಷಿಗೆ ಅದರ ದೃಢೀಕೃತ ಪ್ರತಿಯನ್ನು ತೋರಿಸಿದಾಗ ಸಾಕ್ಷಿ ಅದು ಸುಳ್ಳು ಇದೆ ಅಂತ ಹೇಳಿ ಗುರುತಿಸಲು ನಿರಾಕರಿಸಿದ್ದರಿಂದ ಸದರಿ ದಾಖಲೆಯನ್ನು ಪ್ರತಿವಾದಿಯರ ಸಾಕ್ಷಿ ಸಮಯದಲ್ಲಿ ಹಾಜರುಪಡಿಸಲು ವಕೀಲರಿಗೆ ಸೂಚಿಸಲಾಯಿತು. ಪ್ರತಿವಾದಿಯರು ವಿಪಿಸಿ ನಂಃ999/1, 999/2, 999/3, 1000/ಅ, 1000/ಬ ಹಾಗೂ 1000/ಬ/ಕ ರ ಎಲ್ಲಾ ಉತಾರಗಳನ್ನು ಪಂಚಾಯತಿಯಿಂದ ಪಡೆದು ಅದರೊಂದಿಗೆ ಚಕ್ಕುಬಂದಿಯು ಸಹ ಪಡೆದು ಅವುಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವು ಸುಳ್ಳು ಇದೆ ಅಂತ ನುಡಿದಿದ್ದರಿಂದ ಅವು ಎಲ್ಲಾ ದಾಖಲೆಗಳನ್ನು ಪ್ರತಿವಾದಿಯರ ಸಾಕ್ಷಿ ಸಮಯದಲ್ಲಿ ಹಾಜರುಪಡಿಸಲು ವಕೀಲರಿಗೆ ಸೂಚಿಸಲಾಯಿತು.

16. ನೀವು ಏನಾದರು ಗ್ರಾಮ ಪಂಚಾಯತಿಗೆ ಹೋಗಿ ವಿಪಿಸಿ ನಂಃ999ರ ಅಕ್ಕ ಪಕ್ಕದಲ್ಲಿ ಇರುವ ಆಸ್ತಿಗಳ ಉತಾರದೊಂದಿಗೆ ಚಕ್ಕುಬಂದಿ ಕೊಡಿ ಅಂತ ಕೇಳಿದ್ದರಾ ಎಂದರೆ ಸಾಕ್ಷಿ ಅವು ಎಲ್ಲಾ ಕೇಳಿಯೇ ಪಡೆದು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಖರೀದಿ ಹಿಡಿದ 1/3 ಅಂಶ ಜಾಗೆ ಈಗ ಪ್ರಸ್ತುತ ವಿಪಿಸಿ ನಂಃ1000/ಅ ರಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಖರೀದಿ ಹಿಡಿದ ವಿಪಿಸಿ ನಂಃ999ರ 1/3ಭಾಗ ಅದರಲ್ಲಿ ಕಾಣಿಸಿದ ಚಕ್ಕುಬಂದಿ ಒಳಗಡೆ ಬರುವುದಿಲ್ಲ ಎಂದರೆ ಸರಿಯಲ್ಲ.

17. ಈಗ ನಾನು ಶೆಡ್ಡು ಹಾಕಿಕೊಂಡು ವಾಸವಾಗಿರುವ ಜಾಗೆ ವಿಪಿಸಿ ನಂಃ1000/ಅ ರಲ್ಲಿ ಸೇರಿಕೊಂಡಿದೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನಿಯೋಗಿಯನ್ನು ನಿಯೋಗಿಸಿ ಖರೀದಿ ಹಿಡಿದಂತಹ ಆಸ್ತಿಯನ್ನು ಗುರುತಿಸಿ ಆ ಪ್ರಕಾರ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಹೇಳುವ ಪ್ರಕಾರ ನನ್ನ ತಂದೆ ವಿಪಿಸಿ ನಂಃ999 ರ ಒಟ್ಟಾರೆ ಆಸ್ತಿಯನ್ನು ಖರೀದಿ ಹಿಡಿದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅದರಲ್ಲಿ ಕೇವಲ 1/3 ಅಂಶ ಜಾಗೆಯನ್ನು ಮಾತ್ರ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ರಶೀದಅಹ್ಮದ, ರಿಯಾಜ, ಬಸೀರ ಮತ್ತು ಜಾಫರ ಇವರ ಪಾಲಿನ ಆಸ್ತಿಯನ್ನು ಮಾತ್ರ ನಿಪಿಃ1 ಖರೀದಿ ಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿ. ವಿಪಿಸಿ ನಂಃ999 ರಲ್ಲಿ 1/3 ಅಂಶ ಖರೀದಿ ಹಿಡಿದಂತಹ ಜಾಗ ನನ್ನ ಕಬ್ಜೆಯಲ್ಲಿ ಇದ್ದು, ಆದರೆ ಸದರಿ ವಿಪಿಸಿಯ ನಂಬರಿನ ಪೂರ್ಣ ಆಸ್ತಿಯನ್ನು ನನ್ನ ತಂದೆ ಖರೀದಿ ಹಿಡಿದಿರುವುದಿಲ್ಲ ಎಂದರೆ ಸಾಕ್ಷಿ ನಾವು ವಿಪಿಸಿ ನಂಃ999 ನ್ನು ಖರೀದಿ ಹಿಡಿದಿದ್ದೇನೆ ಎಂದು ನುಡಿಯುತ್ತಾರೆ.

18. ನನ್ನ ತಂದೆ ಮತ್ತು ಅವರ ತಮ್ಮಂದಿರು ವಾಟ್ನಿ ಮಾಡಿಕೊಂಡು ಆ ಪ್ರಕಾರ ಅವರ ಅವರಿಗೆ ಬಂದ ಆಸ್ತಿಗಳ ಕಬ್ಜಾವಹಿವಾಟದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಮ್ಮ ಮನೆತನದಲ್ಲಿ ವಾಟ್ನಿ ಆಗಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಅದೇ ಪ್ರಕಾರ ಆಶ್ರಯ ಮನೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಆಶ್ರಯ ಮನೆ ಕಟ್ಟಲು ಆ ಸಂಬಂದ ಪಚಾಯತಿಯಿಂದ ಅನುಮತಿ ಪಡೆದು ಅದನ್ನು ಕಟ್ಟಿ ಅದರಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**